

ಕಳಚಲಿಲ್ಲ ನೋಡು. ವಾಸುವಿನ ನೆನಪುಗಳಿಂದ ಮುಕ್ತಳಾಗಬೇಕೆಂಬ ಹಟದಲ್ಲಿ ಮತ್ತೆ ಮತ್ತೆ ಪ್ರೇಮಿಸಿದೆ. ನಶೆಯಂಥ ಪ್ರಥಮ ಪ್ರೇಮ ನಂತರದಲ್ಲಿ ಒಂದು ಚಟವಾಗ್ತದೆ...ಆದರೆ ಆ ಪ್ರೀತಿಪ್ರೇಮಗಳು ಹೆಚ್ಚು ಕಾಲ ಉಳಿತಿರಲಿಲ್ಲ. ಬ್ರೇಕಪ್ ಬ್ರೇಕಪ್ ಬ್ರೇಕಪ್... ಪ್ರತೀಕಾರಕ್ಕಾಗಿಯೋ ಪಶ್ಚಾತ್ತಾಪದಿಂದಲೋ ಪ್ರೀತಿಸುತ್ತಿರುವೆ ಎಂದು ಅನಿಸುತ್ತಿತ್ತು. ಇರಲಿ, ಮುಂದಿನ ಕತೆ ಕೇಳು; ನಂತರದಲ್ಲಿ ಎಲ್ಲವನ್ನೂ ಮನ್ನಿಸುವಂಥ ಗಂಡ ಸಿಕ್ಕಿದ. ಅವನೊಡನೆ ಒಳ್ಳೆಯ ಬಾಳನ್ನೇ ಬದುಕಿದೆ ಅನ್ನು. ಆದ್ರೆ ಸತ್ತಂವನ ಒಳ್ಳೆತನ ಅತಿಯಾಯ್ತು. ಕ್ರಮೇಣ ಅದು ಫೇಕ್ ಅನಿಸಲು ಶುರುವಾಯ್ತು. ಮದುವೆಗೆ ಮೊದಲು ನಮ್ಮ ಪೂರ್ವಾಶ್ರಮದ ವಿಷಯಗಳನ್ನು ಹೇಳಿಕೊಂಡಿದ್ದು ಖರೆ. ಮುಂದೆ ಅದನ್ನು ಕೆದಕಬಾರದು ಎಂದು ಪ್ರಾಮಿಸ್ ಮಾಡಿದ್ದು ಕೂಡ ನಿಜ. ಆದರೆ ಆಗಾಗ ನಾನಾಗಿಯೇ ಕಾಲೇಜ್ ಲೈಫಿನ ಸುದ್ದಿ ತೆಗೆಯುತ್ತಿದ್ದೆ. ಪಾವಟೆ ಪಾಯಿಂಟು, ದೇವಸ್ಥಾನದ ಜಗಲಿ, ಹೊನ್ನೆಬೈಲ ಬೀಚಲ್ಲಿ ರೋಮ್ಯಾನ್ಸು-ಹೀಗೆಲ್ಲ ವಿಷಯ ಎತ್ತುತ್ತಿದ್ದೆ. ಕೋಟೆಬೇಣದಲ್ಲಿ ನಡೆಯುವ ಭಾನಗಡಿಗಳ ಬಗ್ಗೆ ಹೇಳುತ್ತಿದ್ದೆ. ನಿಂಗೆ ಗೊತ್ತಲ್ಲ, ನಮ್ಮ ಕಾಲದಲ್ಲಿ ಹುಡುಗ ಹುಡುಗಿ ಅಂಕೋಲಿಯ ಕೋಟೆಬೇಣಕ್ಕೆ ಹೋದರು ಅಂದರೆ ಅದು ಪ್ರೇಮದ ತುರೀಯಾವಸ್ಥೆ ಅಂತ? ಅವನು ವ್ಯಗ್ರಗೊಳ್ಳಲಿ ಎಂದು ಕೋಟೆಬೇಣದ ಸ್ಥಳ ಮಹಿಮೆಗೆ ರೆಕ್ಕೆ ಪುಕ್ಕ ಕಟ್ಟಿ ಕಥೆ ಮಾಡುತ್ತಿದ್ದೆ.

'ಆದ್ರೆ ನಿಂಗೆ ನಿಜ ಹೇಳ್ತೆನೆ, ನಾನು ಮತ್ತು ವಾಸು ಕೋಟೆಬೇಣಕ್ಕೆ ಹೋದದ್ದು ಹೌದು. ಈಗ ಹೇಗಿದೆಯೋ ಗೊತ್ತಿಲ್ಲ, ಆಗ ಕೋಟೆಬೇಣ ಅಂದರೆ ಸಾಗುವಾನಿ ಮರಗಳು ತುಂಬಿದ ನಿರ್ಜನ ಪ್ರದೇಶ. ಅಲ್ಲಿ ಶತಮಾನಗಳಷ್ಟು ಹಿಂದಿನ ಕೋಟೆಯ ಕುರುಹುಗಳೂ ಅವಶೇಷಗಳೂ ಬಿದ್ದುಕೊಂಡಿವೆಯಲ್ಲ.